# ಕರ್ನಾಟಕ ವಿಧಾನ ಪರಿಷತ್ತು

**01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 538**

**02. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ**
**(ನಾಮ ನಿರ್ದೇಶನ ಹೊಂದಿದವರು)**

**03. ಉತ್ತರಿಸುವ ದಿನಾಂಕ : 20.02.2023**

**04. ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರವು ಗೃಹ ಇಲಾಖೆಯನ್ನು ಕರೋನ ವಾರಿಯರ್ ಎಂದು ಯಾವ ದಿನಾಂಕದಂದು ಘೋಷಿಸಿದೆ; ಘೋಷಿಸಿದ ದಿನಾಂಕದಿಂದ ಕೆಎಸ್ಆರ್‌ಪಿ 8ನೇ ಪಡೆ ಶಿವಮೊಗ್ಗ ಈ ಘಟಕದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಎಷ್ಟು ಜನ ನೌಕರರು ಮೃತಪಟ್ಟಿರುತ್ತಾರೆ; ಮೃತಪಟ್ಟ ನೌಕರರು ಪ್ರತ್ಯೇಕವಾಗಿ ಕೋವಿಡ್-19 ಕೆಲಸ ಕಾರ್ಯದಲ್ಲಿ ಕರ್ತವ್ಯ ನಿರ್ವಹಿಸಿರುವರೆ; (ಸಂಪೂರ್ಣ, ವಿವರ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಆಇ 217 ವೆಚ್ಚ-11/2020 ದಿನಾಂಕ: 03.09.2020 ರಲ್ಲಿ ಗೃಹ ಇಲಾಖೆಯು ಸೇರಿದಂತೆ, ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಸಂಬಂಧ, ಕರ್ತವ್ಯದಿಂದಾಗಿ ಸೋಂಕಿಗೆ ಒಳಗಾಗಿ ನಿಧನರಾದ ಸಂದರ್ಭದಲ್ಲಿ ಪರಿಹಾರಧನವನ್ನು ಮಂಜೂರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಕೆಎಸ್ಆರ್‌ಪಿ 8ನೇ ಪಡೆ ಶಿವಮೊಗ್ಗ ಈ ಘಟಕದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿರುವವರ ವಿವರ ಹೀಗಿದೆ.<br><br>1. ಹೆಚ್.ಸತೀಶ ಎ.ಆರ್.ಎಸ್.ಐ ಮರಣ ದಿ:07.10.2020: ಇವರಿಗೆ ಎಸ್.ಆರ್.ಎಫ್ ಐಡಿ 2954700115053 ರಲ್ಲಿ ಕೋವಿಡ್-19 ಪಾಸಿಟಿವ್ ವರದಿ ದೃಢಪಟ್ಟಿರುತ್ತದೆ. ಇವರು ಪಡೆಯ ಮುಖ್ಯದ್ವಾರದ ಪಹರೆ ಕರ್ತವ್ಯ ಅಧಿಕಾರಿಯಾಗಿ ಹೊರಕರ್ತವ್ಯದಿಂದ ಪಡೆಗೆ ಅಗಮಿಸುವ ಸಿಬ್ಬಂದಿಗಳು ಮತ್ತು ಹೊರಗಡೆಯಿಂದ ಪಡೆಯ ವಸತಿ ಗೃಹಗಳಿಗೆ ಆಗಮಿಸುವ ನಿವಾಸಿಗಳಿಗೆ ಥರ್ಮಲ್ ಸ್ಕ್ಯಾನರ್ ಮೂಲಕ ಬಾಡಿಟೆಂಪರೇಚರ್ ಪರೀಕ್ಷಿಸುವ ಮತ್ತು ಪಡೆಗೆ ಮರಳುವ ವಾಹನಗಳಿಗೆ ಡಿಸ್‌ಇನ್‌ಫೆಕ್ಟಂಟ್ ಸಿಂಪಡಿಸುವ ಜವಾಬ್ದಾರಿಯ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ.<br><br>2. ಶ್ರೀ ಎಸ್.ಹೆಚ್. ಅರ್ಗೇಕರ್ ಎ.ಆರ್.ಎಸ್.ಐ ರವರು ಕರ್ತವ್ಯದಲ್ಲಿರುವಾಗ ಕೋವಿಡ್-19 ಸೋಂಕಿಗೆ ಒಳಗಾಗಿ, ದಿನಾಂಕ: 10.09.2020 ರಂದು ಮರಣ ಹೊಂದಿದ್ದು, ಇವರ ಎಸ್.ಆರ್.ಎಫ್ ಐಡಿ 2954700043532 ರಲ್ಲಿ ಕೋವಿಡ್-19 ಪಾಸಿಟಿವ್ ದೃಢಪಟ್ಟಿರುತ್ತದೆ. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಒಳಾಡಳಿತ ಇಲಾಖೆಯನ್ನು ಕರೋನ ವಾರಿಯರ್ ಎಂದು ಘೋಷಿಸಿದ ನಂತರ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮರಣ ಹೊಂದಿದ ಎಲ್ಲಾ ನೌಕರರಿಗೂ ಪರಿಹಾರ ಧನ ನೀಡಲಾಗಿದೆಯೇ: ನೀಡಿದ್ದಲ್ಲಿ, ಎಷ್ಟು ಜನ ನೌಕರರಿಗೆ ನೀಡಲಾಗಿದೆ: ಎಷ್ಟು ಜನ ನೌಕರರಿಗೆ ಪರಿಹಾರ ಧನ ನೀಡಿರುವುದಿಲ್ಲ: (ಸಂಪೂರ್ಣ ವಿವರ ನೀಡುವುದು) | ಈ ಘಟಕದಲ್ಲಿ ಕರ್ತವ್ಯ ನಿರತ ಸಂದರ್ಭದಲ್ಲಿ 02 ಅಧಿಕಾರಿಯವರುಗಳು ಕೊವಿಡ್-19 ರೋಗಕ್ಕೆ ತುತ್ತಾಗಿ ಮರಣ ಹೊಂದಿದ್ದು, ಸದರಿಯವರುಗಳಿಗೆ ಪರಿಹಾರಧನವನ್ನು ಮಂಜೂರು ಮಾಡಲಾಗಿರುತ್ತದೆ. |
| ಇ) | ಒಳಾಡಳಿತ ಇಲಾಖೆಯನ್ನು ಕರೋನ ವಾರಿಯರ್ ಎಂದು ಘೋಷಿಸಿದ ನಂತರ ಕೆಎಸ್‌ಆರ್‌ಪಿ 8ನೇ ಪಡೆ ಶಿವಮೊಗ್ಗ ಈ ಘಟಕದ ನೌಕರ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ (ಕೋವಿಡ್ ನ್ಯೂಮೋನಿಯ) ತುತ್ತಾಗಿ ದಿನಾಂಕ: 13.06.2021ರಂದು ಸರ್ಕಾರಿ ಮೆಗ್ಗಾನ್ ಜಿಲ್ಲಾ ಆಸ್ಪತ್ರೆಯಲ್ಲಿ ಮರಣ ಹೊಂದಿದ ನೌಕರರಿಗೆ ಪರಿಹಾರ ನೀಡದಿರಲು ಕಾರಣವೇನು: ಪರಿಹಾರ ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ವಿವರ ನೀಡುವುದು) | ಈ ಘಟಕದಲ್ಲಿ ಕರ್ತವ್ಯ ನಿರತ ಸಂದರ್ಭದಲ್ಲಿ 02 ಅಧಿಕಾರಿಯವರುಗಳು ಕೊವಿಡ್-19 ರೋಗಕ್ಕೆ ತುತ್ತಾಗಿ ಮರಣ ಹೊಂದಿದ್ದು, ಇವರಿಗೆ ಪರಿಹಾರ ಧನ ನೀಡಲಾಗಿರುತ್ತದೆ<br>ದಿ॥ ಆನಂದಕಂದ ಎ.ಹೆಚ್. ರವರು ದಿನಾಂಕಃ 13.06.2021 ರಂದು ನಿಧನ ಹೊಂದಿದ್ದು, ಈ ಕೆಳಕಂಡ ಕಾರಣಗಳಿಂದಾಗಿ ಇವರಿಗೆ ಪರಿಹಾರ ಧನವನ್ನು ಮಂಜೂರಿಸಿರುವುದಿಲ್ಲ.<br>ಇವರು ಅನಾರೋಗ್ಯ ನಿಮಿತ್ತ ದಿಃ19.04.2021 ರಿಂದ 18.05.2021 ರವರೆಗೆ ಗಳಿಕೆ ರಜೆ ಮೇಲೆ ತೆರಳಿರುತ್ತಾರೆ. ವೈದ್ಯಕೀಯ ವಿಭಾಗ ಮುಖ್ಯಸ್ಥರು ಮೆಗ್ಗಾನ ಬೋಧನಾ ಜಿಲ್ಲಾ ಆಸ್ಪತ್ರೆ, ಸಿಮ್ಸ್ ಶಿವಮೊಗ್ಗ ರವರ ಮರಣ ದೃಢೀಕರಣ ಪತ್ರ ಸಂಖ್ಯೆಃ ಮೆಬೋಜಿಆಶ/ವೈದಾವಿ/138/2022 ದಿಃ09.03.2022 ರಲ್ಲಿ ಇವರ ಒಳರೋಗಿ ಸಂಖ್ಯೆಃ 202123331 ಆಗಿದ್ದು, ಇವರ ರ್‍ಯಾಟ್ ಆರ್‌ಟಿಪಿಸಿರ್ ಮತ್ತು ಸಿಟಿ ಸ್ಕ್ಯಾನ್ ಪರೀಕ್ಷೆ ನೆಗೆಟಿವ್ ಇದ್ದು, ಸಿಕೆಡಿ ಮತ್ತು ಹೃದಯ ಸಂಬಂಧಿ ಕಾಯಿಲೆಯಿಂದ ಮರಣ ಹೊಂದಿರುವುದಾಗಿ ವರದಿ ನೀಡಿರುತ್ತಾರೆ.<br>ಮುಂದುವರೆದು, ವೈದ್ಯಕೀಯ ವಿಭಾಗ ಮುಖ್ಯಸ್ಥರು ಮೆಗ್ಗಾನ ಬೋಧನಾ ಜಿಲ್ಲಾ ಆಸ್ಪತ್ರೆ, ಸಿಮ್ಸ್ ಶಿವಮೊಗ್ಗ ರವರು ಶ್ರೀಮತಿ ಇಂದ್ರಮ್ಮ ಕೋಂ ದಿ॥ ಆನಂದಕಂದ ಎ.ಹೆಚ್. ರವರಿಗೆ ವಿಳಾಸಿಸಿದ ಪತ್ರದಲ್ಲಿ ಈ ಕೆಳಕಂಡಂತ ವಿವರಣೆ ನೀಡಿರುತ್ತಾರೆ.<br>"ಇವರು ದಿಃ 13.05.2021 ರಂದು ಸಹ್ಯಾದ್ರಿ ನಾರಾಯಣ ಹೃದಯಾಲಯ, ಶಿವಮೊಗ್ಗ ಇಲ್ಲಿ ಕೋವಿಡ್ ಪರೀಕ್ಷೆ ನಡೆಸಿದ್ದು, ಎಸ್‌ಆರ್‌ಎಫ್ ಸಂಖ್ಯೆಃ2954700573413 ಆರ್‌ಟಿಪಿಸಿಆರ್ ಪಾಸಿಟಿವ್ ಇದ್ದು, ಹೆಚ್ಚಿನ ಚಿಕಿತ್ಸೆಗಾಗಿ ದಿಃ 13.05.2021 ರಂದು ಮೆಗ್ಗಾನ್ ಬೋಧನಾ ಜಿಲ್ಲಾ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿರುತ್ತಾರೆ. ಇವರ ಒಳರೋಗಿ ಸಂಖ್ಯೆಃ 202120868 ಆಗಿರುತ್ತದೆ. ಇವರು ದಿನಾಂಕಃ 26.05.2021 ರಂದು ಸಿ.ಟಿ. ಸ್ಕ್ಯಾನ್ ಮಾಡಿಸಿದ್ದು ಇವರ ಸಿಟಿ ಸ್ಕೋರ್ 05/25 ಆಗಿರುತ್ತದೆ. ಚಿಕಿತ್ಸೆ ಪಡೆದು ದಿಃ 27.05.2021 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತಾರೆ. ನಂತರದಲ್ಲಿ ದಿಃ29.05.2021 ರಂದು ಆಸ್ಪತ್ರೆಗೆ ಒಳರೋಗಿಯಾಗಿ ಮರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| | | ದಾಖಲಾತಿಯಾಗಿರುತ್ತಾರೆ. ಒಳರೋಗಿ ಸಂಖ್ಯೆ: 202123331 ಆಗಿರುತ್ತದೆ. ಎಸ್.ಆರ್.ಎಫ್ ಸಂಖ್ಯೆ: 2954700607879 ರ್ಯಾಟ್ ನೆಗೆಟಿವ್ ಇರುತ್ತದೆ. ದಿಃ13.06.2021 ರಂದು ಕೋವಿಡ್ ನ್ಯೂಮೋನಿಯ, ಮೂತ್ರಪಿಂಡ ವೈಫಲ್ಯ ಹಾಗೂ ಹೃದಯ ಸಂಬಂಧಿಕಾಯಿಲೆಯಿಂದ ಮೃತಪಟ್ಟಿರುತ್ತಾರೆಂದು ದೃಢೀಕರಿಸಲಾಗಿದೆ". <br> ಸದರಿಯವರು ದಿಃ19.04.2021 ರಿಂದ 18.05.2021 ರವರೆಗೆ ಗಳಿಕೆ ರಜೆ ಮೇಲೆ ತೆರಳಿದ್ದು, ನಂತರದಲ್ಲಿ ದಿನಾಂಕಃ 19.05.2021 ರಿಂದ ನಿಧನದ ದಿನಾಂಕದವರೆವಿಗೂ ಗಳಿಕೆ ರಜೆ ಮೇಲಿರುತ್ತಾರೆ. ಅಲ್ಲದೇ ಇವರು ಕೊವಿಡ್-19 ನಿಂದ ಮೃತಪಟ್ಟಿರುವ ಬಗ್ಗೆ ಕರ್ನಾಟಕ ಮೀಡಿಯಾ ಬುಲೇಟಿನ್‌ನಲ್ಲಿ ಇವರ ಐಪಿ ನಂಬರ್ ಪ್ರಕಟಕೊಂಡಿರುವುದಿಲ್ಲ. ಮತ್ತು ಇವರು ಕೋವಿಡ್-19 ನಿಂದಾಗಿ ಮರಣ ಹೊಂದಿರುವ ಬಗ್ಗೆ ವೈದ್ಯಕೀಯ ಇಲಾಖೆಯ ಪ್ರಕಟಣೆಯಲ್ಲಿ ಇರುವುದಿಲ್ಲ. ಅಲ್ಲದೇ ಇವರು ದಿನಾಂಕಃ 19.04.2021 ರಿಂದ ಮರಣದ ದಿನಾಂಕದವರೆವಿಗೂ ಸರ್ಕಾರದ ಆದೇಶದನ್ವಯ ಇವರು ಕೋವಿಡ್-19 ಸಾಂಕ್ರಾಮಿಕ ಖಾಯಿಲೆ ನಿಯಂತ್ರಣದ ಕರ್ತವ್ಯ ನಿರ್ವಹಿಸಿರುವುದಿಲ್ಲ. <br> ಆದ್ದರಿಂದ ಇವರಿಗೆ ಪರಿಹಾರಧನ ನೀಡಿರುವುದಿಲ್ಲ. |

**HD/40/PPS/2023**

(ಆರಗ ಜ್ಞಾನೇಂದ್ರ)
**ಗೃಹ ಸಚಿವರು**